# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 652 (751)

ಸದಸ್ಯರ ಹೆಸರು : ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)

**ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು.**

**ಉತ್ತರಿಸುವ ದಿನಾಂಕ : 31.07.2025 (ಕಾಲಾವಕಾಶ ಕೋರಲಾಗಿದ್ದ ಪ್ರಶ್ನೆ**

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ 01.04.2006ರ ಪೂರ್ವದಲ್ಲಿ ನಿವೃತ್ತಿಯಿಂದ ತೆರವಾದ ಹುದ್ದೆಗಳಿಗೆ ಸರ್ಕಾರದ ಅನುಮತಿ ಪಡೆದು 2006ರ ನಂತರ ನೇಮಕವಾಗಿರುವ ಶಿಕ್ಷಕರು ಹಾಗೂ ಶಿಕ್ಷಕೇತರರ ಸಂಖ್ಯೆ ಎಷ್ಟು;</td><td>ಅನುದಾನಿತ ಶಾಲಾ ಕಾಲೇಜುಗಳ ಸಂಖ್ಯೆ:
<table>
<tr><th>ಶಾಲೆ/ಕಾಲೇಜು</th><th>ಶಿಕ್ಷಕರ/ಬೋಧಕರ ಸಂಖ್ಯೆ</th><th>ಬೋಧಕೇತರ ಸಂಖ್ಯೆ</th><th>ಒಟ್ಟು</th></tr>
<tr><td>ಪ್ರಾಥಮಿಕ ಶಾಲೆ</td><td>86</td><td>--</td><td>86</td></tr>
<tr><td>ಪ್ರೌಢಶಾಲೆ</td><td>4695</td><td>784</td><td>5479</td></tr>
<tr><td>ಪದವಿ ಪೂರ್ವ ಕಾಲೇಜು</td><td>1370</td><td>214</td><td>1584</td></tr>
<tr><td>ಒಟ್ಟು</td><td>4918</td><td>998</td><td>5916</td></tr>
</table>
</td></tr>
<tr><td>ಆ)</td><td>ಈ ರೀತಿ ನೇಮಕಗೊಂಡ ಶಿಕ್ಷಕ ಹಾಗೂ ಶಿಕ್ಷಕೇತರರಿಗೆ ಈಗಾಗಲೇ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಗೊಂಡಿರುವ ಸಿಬ್ಬಂದಿಗೆ ನೀಡಿದಂತೆ ಓ.ಪಿ.ಎಸ್ ಸೌಲಭ್ಯವನ್ನು ಒದಗಿಸುವುದುದೇ; ಈ ಕುರಿತು ಸರ್ಕಾರದ ನಿಲುವೇನು; (ಸ್ಪಷ್ಟಪಡಿಸುವುದು)</td><td>
<ul>
<li>ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್ 04) 04ಪಿಇಟಿ 2005,ದ ದಿನಾಂಕ:31/03/2006ರಂತೆ ರಾಜ್ಯದ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ದಿನಾಂಕ : 01-04-2006 ರ ನಂತರ ನೇಮಕಗೊಂಡ ನೌಕರರಿಗೆ ನೂತನ ಪಿಂಚಣಿ ಯೋಜನೆ ಜಾರಿಗೊಳಿಸಲಾಗಿದೆ.</li>
<li>ಸರ್ಕಾರದ ಆದೇಶ ಸಂಖ್ಯೆ : ಆಇ-ಪಿಇಎನ್/99/2023, ದಿನಾಂಕ:24-01-2024 ರಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ:01-04-2006 ನೇಮಕಾತಿಗೆ ಅಧಿಸೂಚನೆ ಹೊರಡಿಸಿ, ನಂತರ ನೇಮಕವಾದ ಸರ್ಕಾರಿ ನೌಕರರಿಗೆ ಹಳೇ ಪಿಂಚಣಿ ಯೋಜನೆ ಯೋಜನೆ ಜಾರಿಯಾಗಿರುತ್ತದೆ.</li>
<li>ಶಿಕ್ಷಣ ಮಸೂದೆ-1983 ರ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ನಿಯಮಗಳು- 1999 ರ ಅಧ್ಯಾಯ -5 ಅನೆಕ್ಷರ್-1 ರ ನಿಯಮ 7 ಮತ್ತು 8 ರನ್ವಯ ಹುದ್ದೆ ಒಳಪಟ್ಟು ಅನುದಾನಕ್ಕೆ ಅನುಮೋದನೆಗೊಂಡ ದಿನಾಂಕದಿಂದ ವೇತನ ಸೌಲಭ್ಯ ನೀಡುವುದರಿಂದ ಈ ನಿಯಮಗಳನ್ವಯ ದಿನಾಂಕ: 01/4/2006ರ</li>
</ul>
</td></tr>
</table>

| | | |
|---|---|---|
| | | ಪೂರ್ವದಲ್ಲಿ ಅನುದಾನಿತ ಶಾಲೆಗಳಲ್ಲಿ ನೇಮಕಗೊಂಡು ದಿನಾಂಕ :1/4/2006 ನಂತರ ಅನುದಾನಕ್ಕೆ ಒಳಪಟ್ಟ ನೌಕರರಿಗೆ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸಲು ಅವಕಾಶವಿರುವುದಿಲ್ಲ. |
| ಇ) | ಅತಿಥಿ ಉಪನ್ಯಾಸಕರಿಗೆ ಗೌರವಧನ ಹೆಚ್ಚಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆಯೇ; (ಮಾಹಿತಿ ನೀಡುವುದು) | • ಸಂಬಂಧಿಸಿದಂತೆ:-ಸರ್ಕಾರದ ಆದೇಶ ಸಂಖ್ಯೆ: ಇಪಿ/50/ಡಿಜಿಡಿ/2022, ದಿನಾಂಕ:: 05-07-20220 ನೀಡಲಾಗುತ್ತಿದ್ದ ಮಾಸಿಕ ಗೌರವ ಸಂಭಾವನೆ ರೂ.9000/-ಗಳನ್ನು ಪರಿಷ್ಕರಿಸಿ ರೂ.12,000/-ಗಳಿಗೆ ಹೆಚ್ಚಿಸಲಾಗಿರುತ್ತದೆ.<br>• ನಂತರ ಸರ್ಕಾರದ ಆದೇಶ ಸಂಖ್ಯೆ: :ಇಪಿ 137 ಎಸ್ ಇ ಎಸ್ 2025 ದಿನಾಂಕ:15-05-20250 .12,000/- ಗೌರವ ಸಂಭಾವನೆಯನ್ನು ರೂ. 14,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿರುತ್ತದೆ.<br>• ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ;- ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕಾತಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ. |
| ಈ) | ಅತಿಥಿ ಉಪನ್ಯಾಸಕರ ಸೇವಾ ಅವಧಿಗೆ ನೇಮಕಾತಿ ಸಂದರ್ಭದಲ್ಲಿ ಅನುಕೂಲವಾಗುವ ದೃಷ್ಟಿಯಿಂದ ಕೃಪಾಂಕ ನೀಡುವ ಪದ್ಧತಿಯು ಜಾರಿಯಲ್ಲಿದೆಯೇ? (ಮಾಹಿತಿ ಒದಗಿಸುವುದು) | ಅತಿಥಿ ಉಪನ್ಯಾಸಕರಿಗೆ ನೇಮಕಾತಿ ಸಂಧರ್ಭದಲ್ಲಿ ಅನುಕೂಲವಾಗುವ ದೃಷ್ಟಿಯಿಂದ ಕೃಪಾಂಕ ನೀಡುವ ಪದ್ಧತಿ ಜಾರಿಯಲ್ಲಿರುವುದಿಲ್ಲ ಹಾಗೂ ನಿಯಮಗಳಲ್ಲಿ ಸಹ ಅದಕ್ಕೆ ಅವಕಾಶವಿರುವುದಿಲ್ಲ. |

**ಸಂಖ್ಯೆ: ಇಪಿ 253 ಎಸ್‌ಇಎಸ್ 2025**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಇಲಾಖಾ ಸಚಿವರು**